**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ. 753/2025**

ಫ್ರಾಸಾ – 6

**ಸಾಕ್ಷಿಯು ದಿಃ 01.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಡಾಃ ರವಿಕುಮಾರ ಎಸ್ |
| ತಂದೆಯ ಹೆಸರು | : | ಸೋಮಣ್ಣ |
| ವಯಸ್ಸು | : | 40 ವರ್ಷ |
| ವೃತ್ತಿ | : | ವೈದ್ಯಾಧೀಕಾರಿಗಳು |
| ವಾಸಸ್ಥಳ | : | ಮೈಸೂರು |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

2017 ರಿಂದ ಇಲ್ಲಿಯವರೆಗೂ ಗುಂಡ್ಲುಪೇಟೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಅರವಳಿಕೆ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ

2. ದಿಃ 06.06.2021 ರಂದು ಮದ್ಯಾಹ್ನ 2.30 ಗಂಟೆ ಸಮಯದಲ್ಲಿ ಚಾಸಾ 1 ರವರು ತಮ್ಮ ಮೇಲೆ ಅದೇ ದಿನ ಬೆಳಿಗ್ಗೆ 11.00 ಗಂಟೆಗೆ ತಮ್ಮ ಮೇಲೆ ವಿನೋದ್ ಮತ್ತು ಗೋಪಿ ರವರು ಮರದ ಪಟ್ಟಿ ಮತ್ತು ಕೈಗಳಿಂದ ಹಲ್ಲೆ ಮಾಡಿದ್ದಾರೆ ಎಂದು ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ನಾನು ಪರೀಕ್ಷಿಸಲಾಗಿ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

1. ಬಲ ತೋಳಿನ ಒಳ ಭಾಗದಲ್ಲಿ ತರಚಿದ ಗಾಯ ಕಂಡುಬಂದಿರುತ್ತದೆ.
2. ಬಲ ಕೈನ ತೋರು ಬೆರಳಿನಲ್ಲಿ ಹರಿದ ಗಾಯ ಕಂಡುಬಂದಿರುತ್ತದೆ.
3. ಕುತ್ತಿಗೆ ಹಿಂಭಾಗದಲ್ಲಿ ನೋವಿನಿಂದ ಕೂಡಿದ ಅನುಭವ ಕಂಡುಬಂದಿರುತ್ತದೆ.
4. ಸೊಂಟದ ಭಾಗದಲ್ಲಿ ನೋವಿನಿಂದ ಕೂಡಿದ ಅನುಭವ ಕಂಡುಬಂದಿರುತ್ತದೆ.

3. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೂಳೆ ತಜ್ಞರಾದ ಡಾಃ ನಾಗಾಚಾರಿ ರವರ ಬಳಿ ಕಳುಹಿಸಿಕೊಟ್ಟಿದ್ದು, ಅವರು ಮಾಡಿದ ವರದಿಯನ್ನು ಪರಿಶೀಲಿಸಲಾಗಿ, compression fracture of T-10 vertebral body ಉಂಟಾಗಿರುವುದು ಕಂಡುಬಂದಿರುತ್ತದೆ. ಸದರಿ ಡಾಃ ನಾಗಾಚಾರಿ ರವರು ಸುಮಾರು 2 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ.

4. ನಂತರ ನಾನು ಸದರಿ 1 ರಿಂದ 3ನೇ ಗಾಯಗಳು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ ಮತ್ತು 4ನೇ ಗಾಯವು ತೀರ್ವ ಸ್ವರೂಪದ ಗಾಯವಾಗಿರುತ್ತದೆ ಎಂದು ನಿಪಿ 4 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷಿಯು ಅದರಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 4(ಬಿ) ಎಂದು ಗುರ್ತಿಸಲಾಯಿತು. ಮುದ್ದೆ ಮಾಲು 1 ರಿಂದ ಹಲ್ಲೆ ಮಾಡಿದರೆ ನಿಪಿ 4 ರಲ್ಲಿ ಹೇಳಿರುವ ಗಾಯ ಆಗುವ ಸಾಧ್ಯತೆ ಇರುತ್ತದೆ.

**<u>ಪಾಟೀ ಸವಾಲು :- ಆರೋಪಿಗಳ ಪರ ವಕೀಲರಿಂದ</u>**

ಚಾಸಾ 1 ರವರು ಸ್ವತಃ ಚಿಕಿತ್ಸೆಗಾಗಿ ಬಂದಿದ್ದರು. ಚಾಸಾ 1 ರವರಿಗೆ ಸುಮಾರು ಎಷ್ಟು ಗಂಟೆಗಳ ಹಿಂದೆ ಗಾಯಗಳು ಉಂಟಾಗಿದ್ದವು ಎಂಬುವುದರ ಬಗ್ಗೆ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ. ಚಾಸಾ 1 ರವರು ಪಟ್ಟಿಯಿಂದಲೂ ಆರೋಪಿಗು ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿದರು ಎಂದು ನಾನು ಸಾಕ್ಷ್ಯ ನುಡಿದಿದ್ದು, ಆ ರೀತಿ ಪಟ್ಟಿ ಈ ದಿನ ನ್ಯಾಯಾಲಯದಲ್ಲಿ ಇಲ್ಲ ಎಂದರೆ ಸರಿ. ನಾನು x-ray ಅನ್ನು ಪರಿಶೀಲಿಸಿ ಗಾಯದ ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸರಿ. ಒಬ್ಬ ವ್ಯಕ್ತಿ ಜೋರಾಗಿ ಓಡುವಾಗ ಒರಟಾದ ಸ್ಥಳದಲ್ಲಿ ಬಿದ್ದರೆ 1 ರಿಂದ 3ನೇ ರೀತಿಯ ಗಾಯಗಳು ಉಂಟಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಒಬ್ಬ ವ್ಯಕ್ತಿ ಎತ್ತರದ ಸ್ಥಳದಿಂದ ನೆಲಕ್ಕೆ ಬೆನ್ನು ಕೊಟ್ಟು ಬಿದ್ದರೆ 4ನೇ ರೀತಿಯ ಗಾಯವಾಗುವ ಸಂಭವ ಇದೆ ಎಂದರೆ ಸರಿ. ನಾನು ಚಾಸಾ 1 ರವರಿಗೆ ಯಾವುದೇ ಚಿಕಿತ್ಸೆ ನೀಡಿಲ್ಲ ಮತ್ತು ಪೊಲೀಸರಿಗೆ ಅನೂಕುಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜನಕರು ಮರು ವಿಚಾರಣೆ ಮಾಡಲು ಅವಕಾಶ ಕೋರಿದ್ದು, ಸಾಕ್ಷಿಯ ಹೇಳಿಕೆ ಮತ್ತು ದಾಖಲೆಯನ್ನು ಪರಿಶೀಲಿಸಿ ಅನುಮತಿಲಾಯಿತು.)

**ಮರು ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ನಿಪಿ 4 ಗಾಯದ ಪ್ರಮಾಣ ಪತ್ರದಲ್ಲಿ ಮರದ ದೊಣ್ಣೆಯಿಂದ ಹಲ್ಲೆ ಮಾಡಿರುವುದಾಗಿ ನಮೂದಿಸಿದ್ದೇನೆ ಎಂದರೆ ಸರಿ.

**ಮರು ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ**

ಚಾಸಾ 1 ರವರು ತಮಗೆ ದೊಣ್ಣೆಯಿಂದ ಹಲ್ಲೆ ಮಾಡಿರುವುದರ ಬಗ್ಗೆ ನನಗೆ ತಿಳಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ